ಬೇಲೂರು ನಗರದಲ್ಲಿರುವ ಕೆ.ಎಸ್. ಆರ್.ಟಿ.ಸಿ. ಬಸ್ ನಿಲ್ದಾಣಕ್ಕೆ ಹೆಚ್ಚುವರಿ ಸ್ಥಳ ನೀಡುವುದು

923 (1370) ಶ್ರೀ ವೈ.ಎನ್.ರುದ್ದೇಶ್‌ಗೌಡ (ಬೇಲೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ನಗರದಲ್ಲಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಬಸ್ ನಿಲ್ದಾಣ ಇರುವ ಜಾಗವು ಎಷ್ಟು ಎಕರೆ ವ್ಯಾಪ್ತಿಯಲ್ಲಿದೆ;

ಆ) ಈ ಜಾಗದಲ್ಲಿ ಪ್ರಯಾಣಿಕರಿಗೆ ಮೂಲಭೂತ ಸೌಲಭ್ಯ ಸೇರಿದಂತೆ ಎಲ್ಲಾ ಸೌಲಭ್ಯ ಒದಗಿಸಲು ಸಾಧ್ಯವೇ;

ಇ) ಸಾಧ್ಯವಾಗದಿದ್ದಲ್ಲಿ ಹೆಚ್ಚುವರಿ ಜಾಗಕ್ಕಾಗಿ ಸಂಸ್ಥೆ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) :

ಅ) ಬೇಲೂರಿನಲ್ಲಿ ಹಾಲಿ ಬಸ್ ನಿಲ್ದಾಣವು 1 ಎಕರೆ ಪ್ರದೇಶದಲ್ಲಿರುತ್ತದೆ.

ಆ) ಪ್ರಸ್ತುತ ಇರುವ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ ಎಲ್ಲಾ ಮೂಲಭೂತ ಸೌಕರ್ಯಗಳಾದ ಉಪಾಹಾರ ಗೃಹ, ಪ್ರಯಾಣಿಕರ ಕಾಯುವ ಹಜಾರ ಅಂಗಡಿಗಳು, ವಾಹನಗಳ ನಿಲುಗಡೆ ಆವರಣ ಇತ್ಯಾದಿ ಸೌಲಭ್ಯಗಳನ್ನು 1 ಎಕರೆ ನಿವೇಶನದಲ್ಲಿ ಒದಗಿಸಲಾಗಿದೆ.

ಇ) ಬಸ್‌ಗಳ ಸುಗಮ ಕಾರ್ಯಾಚರಣೆಗಾಗಿ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತಿರುವ ಲೋಕೋಪಯೋಗಿ ಇಲಾಖೆಯ ಪರಿವೀಕ್ಷಣಾ ಬಂಗಲೆಯ ನಿವೇಶನದಲ್ಲಿ 4.24 ಗುಂಟೆ ಜಾಗವನ್ನು ಒದಗಿಸುವಂತೆ ಲೋಕೋಪಯೋಗಿ ಇಲಾಖೆಯವರನ್ನು ಕೋರಲಾಗಿದ್ದು, ಸದರಿ ನಿವೇಶನವು ಸಾರಿಗೆ ನಿಗಮದ ವಶಕ್ಕೆ ಬಂದ ಮೇಲೆ ಈ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು.